KARN010019612022

Presented on	:	26-07-2022
Registered on	:	27-07-2022
Decided on	:	02-06-2026

Duration: 03 years 10 months 07 days

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

:ಉಪಸ್ಥಿತರು:

M H ANNAYYANAVAR
Digitally signed by M H ANNAYYANAVAR
Date: 2026.06.02 18:01:30 +0530

ಶ್ರೀಯುತ ಎಂ.ಹೆಚ್. ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

ದಿನಾಂಕ 2 ನೇ ಜೂನ್ ಮಾಹೆ 2026

ಮಧ್ಯಸ್ಥಗಾರ ಅರ್ಜಿ ಸಂಖ್ಯೆ 377/2022

ಅರ್ಜಿದಾರರು: 1. ಮಹದೇವಮ್ಮ ಕೋಂ ಚನ್ನಬಸವಯ್ಯ.
(ಮೃತಪಟ್ಟಿದ್ದು, ಅವರ ಕಾನೂನು ವಾರಸುದಾರರು)

1a. ಎನ್.ಸಿ.ಹೇಮಲತಾ,
ಬಿನ್ ಚನ್ನಬಸವಯ್ಯ,
ವಯಸ್ಸು 48 ವರ್ಷ.

1b. ಶಶಿಧರ,
ಬಿನ್ ಚನ್ನಬಸವಯ್ಯ,
ವಯಸ್ಸು 46 ವರ್ಷ.

1c. ಸಚ್ಚಿದಾನಂದಮೂರ್ತಿ,
ಬಿನ್ ಚನ್ನಬಸವಯ್ಯ,
ವಯಸ್ಸು 44 ವರ್ಷ.

ಎಲ್ಲರ ವಾಸಃ ನಾರಸಂದ್ರ ಗ್ರಾಮ,
ಕುದೂರು ಹೋಬಳಿ, ಮಾಗಡಿ ತಾಲ್ಲೂಕು,
ರಾಮನಗರ.
(ಶ್ರೀ ಟಿ**.**ಕೆ**.**ನವೀನ್ ಕುಮಾರ್**.,** ವಕೀಲರು**)**

- ವಿರುದ್ಧ -

ಎದುರುದಾರರು**:** 1. ವಿಶೇಷ ಭೂಸ್ವಾಧೀನಾಧಿಕಾರಿಗಳು
ಹಾಗೂ ಸಕ್ಷಮ ಪ್ರಾಧಿಕಾರ,
ರಾಷ್ಟ್ರೀಯ ಹೆದ್ದಾರಿ - 48.
ನೆಲಮಂಗಲ – ಹಾಸನ ವಿಭಾಗ,
ಕೆ.ಆರ್.ಎಸ್. ಬಡಾವಣೆ, ಬಿ.ಎಂ.ರಸ್ತೆ,
ಕುಣಿಗಲ್ - 572130.

2. ಯೋಜನಾ ನಿರ್ದೇಶಕರು,
ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ,
ರಾಷ್ಟ್ರೀಯ ಹೆದ್ದಾರಿ - 48.
ಬೆಂಗಳೂರು - ತುಮಕೂರು ರಸ್ತೆ,
ಸರ್ವೆ ನಂ.13/14 ನೇ ಕಿ.ಮೀ.
ನಾಗಸಂದ್ರ, ಬೆಂಗಳೂರು - 73.

3. ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ
ಮಧ್ಯಸ್ಥಗಾರರು, ಎನ್.ಹೆಚ್.48,
ರಾಮನಗರ ಜಿಲ್ಲೆ - 562159.
(1 ಮತ್ತು **2** ರವರ ಪರವಾಗಿ ಶ್ರೀ ಎ**.**ವಿ**.**ಕೆ**.,** ವಕೀಲರು**)**
(3 ರವರ ಪರವಾಗಿ ಡಿ**.**ಜಿ**.**ಪಿ**.**ರವರು**)**

****

:: ತೀರ್ಪು ::

ಅರ್ಜಿದಾರರ ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಮಧ್ಯಸ್ಥಗಾರ ಮತ್ತು ಸಂಧಾನ ಕಾಯ್ದೆ 1996 ಕಲಂ.34(2) ರಡಿಯಲ್ಲಿ ಅರ್ಜಿ ಸಲ್ಲಿಸಿ ಮಾನ್ಯ ನ್ಯಾಯಾಲಯವು 3 ನೇ ಎದುರುದಾರರು ಎಲ್ಎಕ್ಯೂ(ಎ)/ಎನ್.ಹೆಚ್-48/ಎಆರ್‌ಬಿ/134/2011-12

ದಿನಾಂಕಃ 06.08.2020 ರಂದು ಮಾಡಿದಂತ ಆದೇಶವನ್ನು ರದ್ದುಪಡಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. <u>ಈ ಕೇಸಿನ ಸಂಕ್ಷಿಪ್ತ ಸಾರಾಂಶ:</u> ಅರ್ಜಿದಾರರು ಮಾಗಡಿ ತಾಲ್ಲೂಕು, ಕುದೂರು ಹೋಬಳಿ, ನಾರಸಂದ್ರ ಗ್ರಾಮ ಠಾಣಾಗೆ ಸೇರಿದ 72 ಚದುರ ಮೀಟರ್ ಸ್ವತ್ತಿನ ಮಾಲೀಕರಿದ್ದು, ಸದರಿ ಸ್ವತ್ತನ್ನು ರಾಷ್ಟ್ರೀಯ ಹೆದ್ದಾರಿ-48 ಅಗಲೀಕರಣಕ್ಕೆ ಸದರಿ ಸ್ವತ್ತನ್ನು 1 ಮತ್ತು 2 ನೇ ಎದುರುದಾರರು ಸ್ವಾಧೀನಪಡಿಸಿಕೊಂಡಿದ್ದು, ಇದಕ್ಕೆ ಸಂಬಂಧಪಟ್ಟಂತೆ ದಿನಾಂಕ 08-10-2009 ರಂದು ರಾಷ್ಟ್ರೀಯ ಹೆದ್ದಾರಿ ಕಾಯ್ದೆ, 1956 ಕಲಂ.3(ಎ) ಪ್ರಕಾರ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುತ್ತಾರೆ. ನಂತರ ದಿನಾಂಕ 11.03.2010 ರಂದು ಕಲಂ.3(ಡಿ) ಪ್ರಕಾರ ಅಂತಿಮ ಅಧಿಸೂಚನೆಯನ್ನು ಹೊರಡಿಸಿ, ಸ್ಥಳವನ್ನು ಪರಿಶೀಲನೆ ಮಾಡಿ ನಂತರ ದಿನಾಂಕ 17.04.2010 ರಂದು ಭೂಸ್ವಾಧೀನಾಧಿಕಾರಿಗಳು ಅವಾರ್ಡ್ ಮಾಡಿದ್ದು ಇರುತ್ತದೆ. ನಂತರ ದಿನಾಂಕ 13.10.2009 ನೋಟೀಸ್ ಕೊಟ್ಟಿದ್ದು, ಭೂಸ್ವಾಧೀನಪಡಿಸಿಕೊಂಡಂತ ಬೆಲೆ 1 ಎಕರೆಗೆ ರೂ.9 ಲಕ್ಷ, ಭೂಸ್ವಾಧೀನಪಡಿಸಿಕೊಂಡಂತ ಕ್ಷೇತ್ರ ರೂ.17,94,713/- ಕೊಟ್ಟಿರುವುದು ನ್ಯಾಯ ಸಮ್ಮತವಾಗಿರುವುದಿಲ್ಲ. ಸದರಿ ಅವಾರ್ಡನ್ನು ತಿರಸ್ಕರಿಸಿ ಪುನಃ ರಿಮ್ಯಾಂಡ್ ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

3. ನಂತರ ಭೂಸ್ವಾಧೀನಾಧಿಕಾರಿಗಳು ಮಾಡಿದ ಅವಾರ್ಡ್ ನ್ಯಾಯ ಸಮ್ಮತವಾಗಿಲ್ಲದೇ ಇರುವುದರಿಂದ ಹೆಚ್ಚಿನ ಪರಿಹಾರ ಕೋರಿ ಭೂಸ್ವಾಧೀನಾಧಿಕಾರಿಗಳ

ಬಳಿ ಅರ್ಜಿ ಸಲ್ಲಿಸಿದಾಗ ಸದರಿಯವರು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ 3 ನೇ ಎದುರುದಾರರ ಬಳಿ ಕಳುಹಿಸಿದ್ದು, ನಂತರ 3 ನೇ ಎದುರುದಾರರು ಉಭಯ ಪಕ್ಷಗಾರರಿಗೆ ನೋಟೀಸ್ ಕಳುಹಿಸಿದ್ದು, ನಂತರ ಉಭಯ ಪಕ್ಷಗಾರರು 3 ನೇ ಎದುರುದಾರರ ಬಳಿ ದಾಖಲೆಗಳನ್ನು ಹಾಜರುಪಡಿಸಿದ್ದು, ನಂತರ ಉಭಯ ವಕೀಲರ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ಅರ್ಜಿದಾರರು ಸಲ್ಲಿಸಿದಂಥ ಅರ್ಜಿಯನ್ನು ವಜಾ ಮಾಡಲಾಗಿರುತ್ತದೆ.

4. ಸದರಿ ಅವಾರ್ಡಿನ ವಿರುದ್ಧ ಅರ್ಜಿದಾರರು ಈ ಅರ್ಜಿ ಸಲ್ಲಿಸಿ 3 ನೇ ಎದುರುದಾರ ಇವರು ಅವಾರ್ಡ್ ಮಾಡುವಾಗ ನೈಸರ್ಗಿಕ ನ್ಯಾಯವನ್ನು ಉಲ್ಲಂಘನೆ ಮಾಡಿದ್ದು, ರಾಷ್ಟ್ರೀಯ ಹೆದ್ದಾರಿ ಕಾನೂನು ಕಲಂ.3 ಜಿ ಕಡ್ಡಾಯ ನಿಯಮಗಳನ್ನು ಪಾಲಿಸಿರುವುದಿಲ್ಲ. ಸದರಿ ವಶಪಡಿಸಿಕೊಂಡ ಜಮೀನು ಖುಷ್ಕಿ ಜಮೀನಾಗಿದ್ದು, ಕೃಷಿಯೇತ್ತರ ಜಮೀನು ಆಗಿದ್ದರ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ, ಸ್ವಾಧೀನಪಡಿಸಿಕೊಂಡಂತ ಸಮಯದಲ್ಲಿರುವ ಮಾರುಕಟ್ಟೆ ಮೌಲ್ಯ ಹಾಜರುಪಡಿಸಿದಂಥ ದಾಖಲೆಗಳನ್ನು ಭೂಸ್ವಾಧೀನಾಧಿಕಾರಿಗಳು ಪರಿಗಣಿಸಿ ಅವಾರ್ಡ್ ಮಾಡಿದ್ದು, ಸದರಿ ಸ್ವಾಧೀನಪಡಿಸಿಕೊಂಡಂತ ಸ್ವತ್ತು ಮಾಗಡಿ ನಗರಸಭೆ ವ್ಯಾಪ್ತಿಯಿಂದ 5 ಕಿ.ಮೀ. ಒಳಗಡೆ ಇದ್ದು, ಫ್ಯಾಕ್ಟರ್ 1.5 ನ್ನು ಪರಿಗಣಿಸದೇ 2 ನ್ನು ಪರಿಗಣಿಸಿದ್ದು ನ್ಯಾಯ ಸಮ್ಮತವಾಗಿರುವುದಿಲ್ಲ. 3 ನೇ ಎದುರುದಾರ ಇವರು ಕಾನೂನು ಅಂಶಗಳನ್ನು ಸಾಕ್ಷಿ,

ದಾಖಲೆಗಳನ್ನು ಪರಿಗಣಿಸದೇ ಮಾಡಿದ ಅವಾರ್ಡ್ ನ್ಯಾಯ ಸಮ್ಮತವಾಗಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

5. ಅರ್ಜಿ ನೊಂದಣಿ ಮಾಡಿಕೊಂಡು, ಎದುರುದಾರರಿಗೆ ನೋಟೀಸ್ ಕಳುಹಿಸಲಾಗಿ, ಎದುರುದಾರ 1 ರಿಂದ 3 ಇವರು ತಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ, ತಕರಾರು ಸಲ್ಲಿಸಿರುತ್ತಾರೆ.

6. 1 ಮತ್ತು 2 ನೇ ಎದುರುದಾರರು ತಕರಾರು ಸಲ್ಲಿಸಿ, ಅರ್ಜಿದಾರರು ಸಲ್ಲಿಸಿದಂತ ಅರ್ಜಿ ವಸ್ತು ಸ್ಥಿತಿಯಿಂದಾಗಲೀ, ಕಾನೂನು ರೀತಿಯಿಂದಾಗಲೀ ನಿಲ್ಲತಕ್ಕದ್ದಲ್ಲ, ವಜಾ ಆಗತಕ್ಕದ್ದು. 3 ನೇ ಎದುರುದಾರರವರು ಉಭಯ ವಕೀಲರು ಹಾಜರುಪಡಿಸಿದಂತ ದಾಖಲೆಗಳನ್ನು ಹಾಗೂ ಕಾನೂನು ಅಂಶಗಳನ್ನು ಪರಿಗಣಿಸಿ ಆದೇಶ ಮಾಡಿದ್ದು, ನ್ಯಾಯಸಮ್ಮತವಾಗಿರುತ್ತದೆ. ಸದರಿ ಆದೇಶ ನೈಸರ್ಗಿಕ ನ್ಯಾಯವನ್ನು ಪರಿಗಣಿಸಲಾಗಿದೆ. ಸದರಿ ಆದೇಶದಲ್ಲಿ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಇರುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾ ಮಾಡತಕ್ಕದ್ದು ಎಂದು ತಕರಾರು ಸಲ್ಲಿಸಿರುತ್ತಾರೆ.

7. 3 ನೇ ಎದುರುದಾರರು ತಕರಾರು ಸಲ್ಲಿಸಿ, ಅರ್ಜಿಯಲ್ಲಿ ಬರೆದ್ದಂತಾ ವಿಷಯಗಳು ಸಕಾರಣಗಳಿಂದ ಕೂಡಿರುವುದಿಲ್ಲ. ಉಭಯ ವಕೀಲರು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಅವಾರ್ಡ್ ಮಾಡಿದ್ದು ನ್ಯಾಯ ಸಮ್ಮತವಾಗಿರುತ್ತದೆ. ಆದ್ದರಿಂದ ಮಾನ್ಯ ನ್ಯಾಯಾಲಯವು 3 ನೇ ಎದುರುದಾರರು ಮಾಡಿದ್ದಂತ ಆದೇಶದಲ್ಲಿ ಹಸ್ತಕ್ಷೇಪ ಮಾಡಲು

ಯಾವುದೇ ಸಕಾರಣಗಳು ಇರುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ತಕರಾರು ಸಲ್ಲಿಸಿರುತ್ತಾರೆ.

8. ಉಭಯ ವಕೀಲರ ವಾದವನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆ:-

1. ಅರ್ಜಿದಾರರು 3 ನೇ ಎದುರುದಾರರು ಪ್ರಕರಣ ಸಂಖ್ಯೆ ಎಲ್ಎಕ್ಯೂ(ಎ)/ಎನ್.ಹೆಚ್-48/ಎಆರ್‌ಬಿ/134/2011-12 ದಿನಾಂಕ 06.08.2020 ರಂದು ರಂದು ಮಾಡಿದ ಆದೇಶ ನ್ಯಾಯ ಸಮ್ಮತವಾಗಿರುವುದಿಲ್ಲ ಅಂತಾ ಮೇಲ್ನೋಟಕ್ಕೆ ರುಜುವಾತುಪಡಿಸುತ್ತಾರೆಯೇ?
2. ಹಾಗಿದ್ದಲ್ಲಿ, 3 ನೇ ಎದುರುದಾರರು ಮಾಡಿದ ಆದೇಶದಲ್ಲಿ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡಬಹುದೆ?
3. ಯಾವ ಆದೇಶ ?

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

ಅಂಶ ನಂ.1	:	ನಕಾರಾತ್ಮಕವಾಗಿ
ಅಂಶ ನಂ.2	:	ನಕಾರಾತ್ಮಕವಾಗಿ
ಅಂಶ ನಂ.3	:	ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ:

ಕಾರಣಗಳು

10. <u>ಅಂಶ ಸಂಖ್ಯೆ **1** ಮತ್ತು **2:**</u> ನ್ಯಾಯಾಲಯದ ಅನುಕೂಲಕ್ಕೋಸ್ಕರವಾಗಿ ಈ ಅಂಶಗಳನ್ನು ಏಕಕಾಲಕ್ಕೆ ತೆಗೆದುಕೊಳ್ಳಲಾಗಿದೆ.

11. <u>**3** ನೇ ಎದುರುದಾರರು ಮಾಡಿದ್ದಂತಾ ಅವಾರ್ಡ್ ಸಕಾರಣಗಳಿಂದ ಕೂಡಿದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ:</u> ಅರ್ಜಿದಾರರ ಪರ ವಕೀಲರು ವಾದ ಮಾಡುತ್ತಾ 3 ನೇ

ಎದುರುದಾರರು ಆರ್ಬಿಟ್ರೇಟರ್ ಅಧಿಕಾರಿಯಾಗಿದ್ದು, ಸದರಿಯವರು ಮಾಡಿದಂತಾ ಆದೇಶ ಸಕಾರಣಗಳಿಂದ ಕೂಡಿಲ್ಲದೇ ಇರುವುದರಿಂದ, ದಾಖಲಾತಿಗಳನ್ನು ಪರಿಗಣಿಸಿಲ್ಲದೇ ಇರುವುದರಿಂದ, ನೈಸರ್ಗಿಕ ನ್ಯಾಯವನ್ನು ಉಲ್ಲಂಘನೆ ಮಾಡಿದಾಗ, ಸಾಕ್ಷಿಗಳ ವಿಶ್ಲೇಷಣೆಯನ್ನು ಪರಿಗಣಿಸದೇ ಇದ್ದಾಗ ಸ್ವಾಧೀನಪಡಿಸಿಕೊಳ್ಳುವುದಕ್ಕಿಂತ ಪೂರ್ವದಲ್ಲಿ 3 ವರ್ಷದ ಕ್ರಯಪತ್ರದ ಮೌಲ್ಯವನ್ನು ಪರಿಗಣಿಸದೇ ಅವಾರ್ಡ್ ಮಾಡಿದಾಗ ಅಂಥ ಸಂದರ್ಭದಲ್ಲಿ ನ್ಯಾಯಾಲಯವು ಆರ್ಬ್ರಿಟೇಟರ್ ಮಾಡಿದ್ದಂಥ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಅವಕಾಶ ಇರುತ್ತದೆ.

12. <u>ಈ ಮೇಲ್ಕಂಡ ಕಾರಣಗಳನ್ನು **3** ನೇ ಎದುರುದಾರರು ಪರಿಗಣಿಸಿದ್ದಾರೋ, ಇಲ್ಲವೋ ಎಂಬುದರ ಬಗ್ಗೆ:</u> ಅವಾರ್ಡನ್ನು ಪರಿಶೀಲಿಸಲಾಗಿ ಅರ್ಜಿದಾರರ ಪರ ವಕೀಲರ ಮುಖ್ಯ ವಾದ ಅರ್ಜಿದಾರರ ಜಮೀನಿನ್ನು ಸ್ವಾಧೀನಪಡಿಸಿಕೊಂಡ ದಿನಾಂಕಕ್ಕೆ 1 ಎಕೆರೆಗೆ ರೂ.9 ಲಕ್ಷ ಮಾಲ್ಕಿಗೆ 3 ಪಟ್ಟು ನಿಗದಿಪಡಿಸಿರುವುದಿಲ್ಲ ಹಾಗೂ ಜಮೀನಿನ ಫಲವತ್ತೆತೆಯ ಗಣನೆಗೆ ತೆಗೆದುಕೊಂಡಿರುವುದಿಲ್ಲ ಅಂತಾ ಅರ್ಜಿಯಲ್ಲಿ ಹೇಳಿದ್ದು, ಒಂದು ಎಕೆರೆ ರೂ.9 ಲಕ್ಷ ಬೆಲೆ ಬಾಳುತ್ತದೆ ಎಂದು ತೋರಿಸಲು ಒಂದು ದಾಖಲೆಯನ್ನೂ ಸಹಿತ ಅರ್ಜಿದಾರರು 3 ನೇ ಎದುರುದಾರರ ಬಳಿ ಹಾಜರುಪಡಿಸಿರುವುದಿಲ್ಲ. 3 ನೇ ಎದುರುದಾರರು ಅರ್ಜಿದಾರರ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವಾಗ ಪ್ರಾಥಮಿಕ ಅಧಿಸೂಚನೆ ಹೊರಡಿಸಿದಾಗ ಆ ಸಮಯದಲ್ಲಿ ಅರ್ಜಿದಾರರ ಜಮೀನಿನ ಮಾರುಕಟ್ಟೆ ಬೆಲೆ ಮತ್ತು ಮುದ್ರಾಂಕ ಶುಲ್ಕದ ಮೌಲ್ಯ ಹಾಗೂ ಸರ್ಕಾರದ ಸುತ್ತೋಲೆ ಇವುಗಳನ್ನು ಪರಿಗಣಿಸಿದ್ದು ಹಾಗೂ ಸರ್ಕಾರದ

ಮಾರ್ಗಸೂಚಿಯ ಪ್ರಕಾರ ಹಾಗೂ ನಾರಸಂದ್ರ ಗ್ರಾಮದ ಜಮೀನಿನ ಕಂದಾಯ ದಾಖಲೆಯಂತೆ ಗ್ರಾಮಠಾಣಾ ಜಮೀನನ್ನು ಪರಿಗಣಿಸಿ ಮಾರುಕಟ್ಟೆ ಮೌಲ್ಯವನ್ನು ನಿಗಧಿಪಡಿಸಿದ್ದು ನ್ಯಾಯಸಮ್ಮತವಾಗಿರುತ್ತದೆ.

13. ಅರ್ಜಿದಾರರು ಭೂಸ್ವಾಧೀನ ಕಾಯಿದೆ 1894 ರಂತೆ ಭೂಪರಿಹಾರ ಮತ್ತು ಸೌಲಭ್ಯವನ್ನು ಕೊಡಬೇಕೆಂದು ಅಂತಾ ಕೇಳಿದ್ದು, ಆದರೆ ಸದರಿ ಪ್ರಕರಣದಲ್ಲಿ ಭೂ ಸ್ವಾಧೀನವನ್ನು ರಾಷ್ಟ್ರೀಯ ಹೆದ್ದಾರಿ ಕಾನೂನು 1956 ರಡಿಯಲ್ಲಿ ಮಾಡಿರುವುದರಿಂದ ಸದರಿ ಪ್ರಕರಣದಲ್ಲಿ ಭೂಸ್ವಾಧೀನ ಕಾನೂನು ಸ್ಪಷ್ಟವಾಗಿ ಅನ್ವಯವಾಗುವುದಿಲ್ಲ ಸ್ಪಷ್ಟವಾಗಿ ಕಾರಣ ನೀಡಿರುತ್ತಾರೆ.

14. ಅರ್ಜಿದಾರರ ಪರ ವಕೀಲರು ತಮ್ಮ ಅರ್ಜಿ ಮತ್ತು ಲಿಖಿತ ವಾದ ಮಂಡನೆಯಲ್ಲಿ ಎಲ್.ಎ.ಕ್ಯೂ(ಎ)/ಎನ್.ಹೆಚ್.48/ಸಿ.ಆರ್/55/2011-12, ಎಲ್.ಎ.ಕ್ಯೂ(ಎ)/ಎನ್.ಹೆಚ್.48/ಸಿ.ಆರ್/157/2012-13, ಎಲ್.ಎ.ಕ್ಯೂ(ಎ)/ಎನ್.ಹೆಚ್.48/ಸಿ.ಆರ್/164/2012-13 ಮತ್ತು ಎಲ್.ಎ.ಕ್ಯೂ(ಎ)/ಎನ್.ಹೆಚ್.48/ಸಿ.ಆರ್/186/2012-13 ದಿನಾಂಕ 07.07.2015 ರ ಒಂದು ಎಕೆರೆಗೆ ರೂ.9 ಲಕ್ಷ, ನಾರಸಂದ್ರ ಗ್ರಾಮದ ಭೂಸ್ವಾಧೀನಕ್ಕೆ ಒಳಪಟ್ಟ ಜಮೀನಿಗೆ ಮಾರುಕಟ್ಟೆ ಮೌಲ್ಯವನ್ನು ನಿಗಧಿಪಡಿಸಿರುತ್ತಾರೆ ಅಂತಾ ಹಾಗೂ ಸದರಿ ಕ್ಷೇತ್ರ ಖುಷ್ಕಿ ಜಮೀನಾಗಿದ್ದು, ಕೈಗಾರಿಕಾ ಪ್ರದೇಶಕ್ಕೆ ಭೂ ಪರಿವರ್ತತ ಜಮೀನಾಗಿದ್ದು, ರೂ.9 ಲಕ್ಷ ಒಂದು ಎಕೆರೆಗೆ ಮಾಲ್ಕಿಗೆ 3 ಪಟ್ಟು ನಡೆದಿರುವ ವಹಿವಾಟಿನ ಸಂಬಧಪಟ್ಟಂತೆ ಯಾವುದೇ ದಾಖಲೆಯನ್ನು ಅರ್ಜಿದಾರರು 3 ನೇ ಎದುರುದಾರರ ಮುಂದೆ

ಹಾಜರುಪಡಿಸಿರುವುದಿಲ್ಲ ಹಾಗೂ ದೃಢೀಕೃತ ನಕಲನ್ನು ಸಲ್ಲಿಸಿರುವುದಿಲ್ಲ ಅಂತಾ ಸ್ಪಷ್ಟವಾಗಿ ಕಾರಣಗಳನ್ನು ಅವಾರ್ಡಿನಲ್ಲಿ ನಮೂದಿಸಿರುತ್ತಾರೆ. ಆದ್ದರಿಂದ 1 ನೇ ಎದುರುದಾರರು ಮಾಡಿದಂತಾ ಅವಾರ್ಡ್ ನ್ಯಾಯ ಸಮ್ಮತವಾಗಿದ್ದು, ಅರ್ಜಿದಾರರು ಹೆಚ್ಚಿಗೆ ಪರಿಹಾರ ಹಣವನ್ನು ಪಡೆಯಲು ಅರ್ಹರಿರುವುದಿಲ್ಲ ಅಂತಾ 3 ನೇ ಎದುರುದಾರರು ಅರ್ಜಿದಾರರ ಸಲ್ಲಿಸಿದಂತಾ ಅರ್ಜಿಯನ್ನು ತಿರಸ್ಕರಿಸಿದ್ದು ನ್ಯಾಯ ಸಮ್ಮತವಾಗಿರುತ್ತದೆ. 3 ನೇ ಎದುರುದಾರರು ಮಾಡಿದಂತಾ ಆದೇಶದಲ್ಲಿ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಇರುವುದಿಲ್ಲ.

15. <u>ಇದಕ್ಕೆ ಸಂಬಂಧಪಟ್ಟಂತೆ ಮಧ್ಯಸ್ಥಗಾರರು ಕಾನೂನು ಕಲಂ**.34**</u> ಅನ್ನು ಪರಿಶೀಲಿಸಲಾಗಿ, 3 ನೇ ಎದುರುದಾರರು ಮಾಡಿದಂತ ಆದೇಶ ಕಾನೂನು ಬಾಹಿರವಾಗಿದ್ದು, ಸಮರ್ಪಕವಾದಂತ ಕಾರಣಗಳನ್ನು ನೀಡಿಲ್ಲದೇ ಇದ್ದಾಗ, ಹಾಜರುಪಡಿಸಿದಂತ ದಾಖಲಾತಿಗಳನ್ನು ಪರಿಗಣಿಸದೇ ಇದ್ದಾಗ ಅಸ್ಪಷ್ಟವಾಗಿದ್ದಾಗ, ಕಾನೂನು ಅಂಶಗಳನ್ನು ಪರಿಗಣಿಸದೇ ಇದ್ದಾಗ, ಸ್ಪಷ್ಟತೆ ಇಲ್ಲದೇ ಇದ್ದಾಗ, ಇಂತಹ ಸಂದರ್ಭದಲ್ಲಿ ಮಧ್ಯಸ್ಥಗಾರರು ಮಾಡಿದಂತ ಅವಾರ್ಡನ್ನು ರದ್ದುಪಡಿಸತಕ್ಕದ್ದು ಅಂತಾ ಸ್ಪಷ್ಟವಾದ ಕಾನೂನು ಇರುತ್ತವೆ.

16. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸದರಿ ಕಾನೂನಿನ ಅಡಿಯಲ್ಲಿ ನೀಡಿದಂತ ತೀರ್ಪು ***<u>(2025)2 S.C.C. 417 OPG POWER GENERATION PRIVATE LIMITED -Vs- ENEXIO POWER</u>***

COOLING SOLUTIONS INDIA PRIVATE LIMITED AND ANOTHER, ಈ ತೀರ್ಪಿನ ಪ್ಯಾರಾ.63 ರಿಂದ 74 ಅನ್ನು ಪರಿಶೀಲಿಸಲಾಗಿ, ಸದರಿ ಕಾನೂನು ಕಲಂ 34(2)(ಬಿ)(ii) ಪ್ರಕಾರ ಆರ್ಬಿಟ್ರಲ್ ಅವಾರ್ಡ್‌ನಲ್ಲಿ ಮಾನ್ಯ ನ್ಯಾಯಾಲಯವು ಹಸ್ತಕ್ಷೇಪ ಮಾಡಲು ಬರಲಾರದು, ಅವಾರ್ಡ್ ಅಕ್ರಮವಾಗಿದ್ದಲ್ಲಿ ಅಥವಾ ಕಾನೂನು ಬಾಹಿರವಾಗಿದ್ದಲ್ಲಿ ಮಾತ್ರ ಪರಿಗಣಿಸಬೇಕಾಗುತ್ತದೆ, ಆರ್ಬಿಟ್ರಲ್ ಇವರು ಸಮರ್ಪಕವಾದ ಕಾರಣಗಳನ್ನು ನೀಡಿ ಆದೇಶ ಮಾಡಿದ್ದಲ್ಲಿ ಮಾನ್ಯ ನ್ಯಾಯಾಲಯ ಸದರಿ ಆದೇಶದಂತೆ ಹಸ್ತಕ್ಷೇಪ ಮಾಡಲು ಬರಲಾರದು ಹಾಗೂ ಆದೇಶವನ್ನು ಬದಲಾವಣೆ ಮಾಡಲು ಬರಲಾರದು ಅಂತ ತೀರ್ಪು ಇರುತ್ತದೆ. ಸದರಿ ತೀರ್ಪಿನ ಪ್ರಕಾರ 3 ನೇ ಎದುರುದಾರರು ಉಭಯ ವಕೀಲರು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ಸದರಿ ಎದುರುದಾರ ಜಮೀನು ಭೂಪರಿವರ್ತಿತ ಜಮೀನು ಮೌಲ್ಯ, ಮಾರುಕಟ್ಟೆ ಮೌಲ್ಯ ಸ್ವಾಧೀನಪಡಿಸಿಕೊಳ್ಳುವಾಗ ಇರುವ ಮೌಲ್ಯವನ್ನು ಪರಿಗಣಿಸಿ ಅವಾರ್ಡ್ ಮಾಡಿದ್ದು ನ್ಯಾಯಸಮ್ಮತವಾಗಿರುತ್ತದೆ. ಸದರಿ ಅವಾರ್ಡ್‌ಗೆ ನ್ಯಾಯಾಲಯವು ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಇರುವುದಿಲ್ಲ. ಆದ್ದರಿಂದ ಅಂಶ ಸಂಖ್ಯೆ ***1*** ಮತ್ತು ***2*** ನ್ನು ನಕಾರಾತ್ಮಕವಾಗಿ ಉತ್ತರಿಸಲಾಯಿತು.

17. <u>ಅಂಶ ಸಂಖ್ಯೆ**-3:**</u> ಅಂಶ ಸಂಖ್ಯೆ 1 ಮತ್ತು 2 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶ:

ಆದೇಶ

ಅರ್ಜಿದಾರರ ಪರ ವಕೀಲರು ಮಧ್ಯಸ್ಥಗಾರ ಮತ್ತು ಸಂಧಾನ ಕಾಯ್ದೆ 1996, ಕಲಂ.34 ಜೊತೆಗೆ ಸಹವಾಚಕ 7 ನಿಯಮ 1 ರಡಿಯಲ್ಲಿ ಸಲ್ಲಿಸಿದಂತ ಅರ್ಜಿಯನ್ನು ತಿರಸ್ಕರಿಸಲಾಯಿತು.

3 ನೇ ಎದುರುದಾರರು ಎಲ್‌ಎಕ್ಯೂ(ಎ)/ಎನ್.ಹೆಚ್-48/ಎಆರ್‌ಬಿ/134/2011-12 ದಿನಾಂಕಃ 06.08.2020 ರಂದು ಮಾಡಿದಂತ ಅವಾರ್ಡನ್ನು ಖಾಯಂಗೊಳಿಸಲಾಯಿತು.

ಖರ್ಚಿನ ಮೇಲೆ ಯಾವುದೇ ಆದೇಶ ಇಲ್ಲ.

ಸದರಿ ಆದೇಶದ ಪ್ರತಿಯೊಂದಿಗೆ ಮೂಲ ಕಡತವನ್ನು 3 ನೇ ಎದುರುದಾರರ ಕಛೇರಿಗೆ ಕಳುಹಿಸಲು ಆದೇಶಿಸಲಾಯಿತು.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ - III ರವರಿಗೆ ಗಣಕ ಪರದೆ ಮೇಲೆ ನೇರವಾಗಿ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ **2** ನೇ ಜೂನ್ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್. ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ರಾಮನಗರ.

*****